ಮಂಡಿ ಕುಮಾರ್, ಬೆಂಗಳೂರು

ಮುಂಜಾನೆಯ ಬಿಸಿಬಿಸಿ ಕಾಫಿ, ಸಂಜೆಯ ಹಾಟ್ ಡ್ರಿಂಕ್ಸ್ ಪೈಕಿ ಯಾವುದು ಆಹ್ಲಾದಕರ?



ಎರಡೂ ಆಹ್ಲಾದಕರವೇ; ಮುಂಜಾನೆಯದು ಕಾಪಿ ರಾಗ, ಸಂಜೆಯದು 'ಮದ್ಯ'ಮಾವತಿ!

ಮಲ್ಲಿಕಾರ್ಜುನ, ಸುರಧೇನುಪುರ

ಮಾತು ಆಡಿದರೆ ಹೋಯಿತು. ಮುತ್ತು ನೀಡಿದರೆ?

ಸಮ್ಮತವಾದೆಡೆ ಪ್ರತಿಯಾಗಿ ಎಡೆಬಿಡದೆ ಹೊಯ್ಯಿತು; ಇಲ್ಲವಾದೆಡೆ ಹೋಯ್... ಥೂ!

ನೀಲಮ್ಮ ಕುಮಾರಪ್ಪ, ಲಿಂಗಸುಗೂರು

ಬದುಕು ತುಂಬಾ ಬೇಸರ ಆದಾಗ ಏನು ಮಾಡಬೇಕು?

ಬೆಂಗಳೂರಿನ ಕರುಣಾಶ್ರಯಕ್ಕೆ ಭೇಟಿ ಕೊಡಿ. ಅಲ್ಲಿನವರ ಕಷ್ಟಕ್ಕೆ ಹೋಲಿಸಿದರೆ ನಾವೆಲ್ಲ ಪರಮಸುಖಿಗಳು.

ಕುಮಾರ ಚಲವಾದಿ, ಹಾಸನ

ಮದುವೆಯಾಗಿದ್ದರೂ ಬೇರೆ ಹೆಂಗಸರನ್ನು ನೋಡುವ ಚಪಲಕ್ಕೆ ಏನೆನ್ನಬೇಕು?



ಇಂದ್ರಬುದ್ಧಿ!

ವಿ. ಹೇಮಂತಕುಮಾರ್, ಬೆಂಗಳೂರು

ಹೊಟ್ಟೆ ಹಸಿದಾಗ ಬೇಕು ಅನ್ನ. ಹೃದಯ ಹಸಿದಾಗ?

ಅದಕ್ಕೆ ಹಾಕುವವರಿರಬೇಕು ಕನ್ನ.

ಕೆ. ಸಿದ್ದಪ್ಪ, ವಿದ್ಯಾರಣ್ಯಪುರ

ಗೃಹಕ್ಕೂ ಗ್ರಹಕ್ಕೂ ಏನು ವ್ಯತ್ಯಾಸ ರಾಮ್‌ಜೀ?

ಈಗಂತೂ ಗೃಹ ವಾಸ್ತುಶಾಸ್ತ್ರದವನ ಅಧೀನ; ಗ್ರಹ ಜ್ಯೋತಿಷಿಯ ಅಧೀನ!

ಅನಸೂಯ ಟಿ, ಕೇದಿಗೆಮನೆ

ಮನಸ್ಸಿನಲ್ಲಿ ಕಾಡುವ ಭಯಕ್ಕೆ ಮನೆಮದ್ದು ಏನಿದೆ ಹೇಳಿ?

ಅಜ್ಜನ ಅನುಭವದ ನುಡಿಗಳು.

ವಿ. ಹಮೀದ್, ವಿಟ್ಲ

ದಾರಿ ತಪ್ಪಿದ ಮಗನಿಗೂ, ಮಾತು ತಪ್ಪಿದ ಮಗನಿಗೂ ವ್ಯತ್ಯಾಸವೇನು?

ದಾರಿ ತಪ್ಪಿದವ ಅಮೆರಿಕವನ್ನು ಕಂಡುಹಿಡಿದ; ಮಾತು ತಪ್ಪಿದವ ಸನ್ನೆಗಳ ಭಾಷೆಯನ್ನು ಕಂಡುಹಿಡಿದ.

ಜೀವಿ, ಗೊಂಡೇದಹಳ್ಳಿ

ಅತಿ ಹೆಚ್ಚು ಸಂಬಳ ತೆಗೆದುಕೊಳ್ಳುವವರೇ ಕುಟುಂಬ ನಿರ್ವಹಣೆಯಲ್ಲಿ ಸೋಲುತ್ತಿದ್ದಾರಲ್ಲ?

ನಿರ್ವಹಣೆಗೆ ಸಮಯ ದೊರಕಬೇಕಲ್ಲ! ಗಾಣದೆತ್ತಿಗೆ ಹನಿಮೂನ್ ಮರೀಚಿಕೆ.

ಹೆಚ್.ಎಮ್. ಚೆನ್ನವೀರಯ್ಯ, ಹೂವಿನಹಡಗಲಿ

ನೀವು ನಾಸ್ತಿಕರೋ ಆಸ್ತಿಕರೋ?

ಆ ಶಿವನ ಪಾದದ ಆಣೆಯಾಗಿಯೂ ನಾಸ್ತಿಕ.

ಗಂಜಾಂ ನಾಗರಾಜ್, ಮೈಸೂರು

ಈಗಲೂ ತಪಸ್ಸಿಗೆ ಕುಳಿತರೆ ಇಂದ್ರ ಅಪ್ಸರೆಯರನ್ನು ಕಳುಹಿಸಬಹುದೆ?

ಈಗ ತಪಸ್ಸಿಗೂ ಕೂರಬೇಕಿಲ್ಲ. ಆಯಕಟ್ಟಿನ ಸ್ಥಳದಲ್ಲಿ ಕೂರಿ, ಹನಿಟ್ರ್ಯಾಪಿಣಿ ಥಟ್ಟನೆ ಹಾಜರಾಗುತ್ತಾಳೆ.

ಸಿಹಿಮೊಗೆ ರಮೇಶ್, ಮೈಸೂರು

ಆತ್ಮಸಾಕ್ಷಿ ಎಂದರೆ ಏನು ಎಂದು ಒಬ್ಬ ಶಾಸಕ ಕೇಳುತ್ತಿದ್ದಾನೆ. ಉತ್ತರಿಸುವಿರಾ?

ಸಂಸ್ಕಾರದ ಪೀನಲ್‌ಕೋಡ್ ಹಿಡಿದು ಕರ್ಮಗಳ ಕ್ರಾಸ್ ಎಕ್ಸಾಮಿನೇಷನ್ ಮಾಡುವ ಒಳವಕೀಲ.

ಪಿ. ಜಯವಂತ ಪೈ, ಕುಂದಾಪುರ

ಬದುಕಿಗೂ ಬಂದೂಕಿಗೂ ವ್ಯತ್ಯಾಸವೇನು?

ಎಲ್ಲಿದೆ ವ್ಯತ್ಯಾಸ? ಎರಡೂ ಕಡೆ ಒಂದು ಗುಂಡಿಗೆ ಒಂದೇ ಸಾರಿ ಢಂ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಹೆಣ್ಣಿಗೂ ಮಣ್ಣಿಗೂ ವ್ಯತ್ಯಾಸವೇನು ಸರ್?

ಕಣ್ಣಿಗೆ ಮಣ್ಣು ಬಿದ್ದರೆ ಉರಿ, ಹೆಣ್ಣು ಬಿದ್ದರೆ ತಂಪು!

## ವಾರದ ಪ್ರಶ್ನೆ

ರಾಜೀವ್ ಎನ್. ಮಾಗಲ್, ಸಕಲೇಶಪುರ

ರಾಷ್ಟ್ರೀಯ ಪಕ್ಷಿ ನವಿಲು; ರಾಷ್ಟ್ರೀಯ ಪ್ರಾಣಿ ಹುಲಿ ಇರುವಂತೆ ರಾಷ್ಟ್ರೀಯ ಮಾತ್ರೆ ಡೋಲೊ ಆದೀತೆ?

ಆಗ ರಾಷ್ಟ್ರೀಯ ರೋಗಗೀತೆ 'ಮನ್ ಡೋಲೊ ಮೇರಾ ತನ್ ಡೋಲೊ' ಆಗುವುದಂತೆ.

ರತ್ನಾ ಕೊರವರ, ಅರಸೀಕೆರೆ

ಲೇಖಕನಿಗೆ ಬರೆಯಲು ಮೂಡ್ ಬರಲು ಸಿಗರೇಟ್, ಮದ್ಯ ಬೇಕು. ಲೇಖಕಿಯರಿಗೇಕೆ ಬೇಕೆನಿಸುವುದಿಲ್ಲ?

ಅವುಗಳ ಸಹಾಯವಿಲ್ಲದೆಯೇ ಕಿಕ್ ಅನುಭವಿಸುವ, ಕೆಂಡ ಕಾರುವ ಸಾಮರ್ಥ್ಯ ಇರುವುದರಿಂದ.

ಸಿಹಿಮೊಗೆ ರಮೇಶ್, ಮೈಸೂರು

ರಾಜಕಾರಣಿಗಳು ತಮ್ಮ ಮನೆಯನ್ನು ಯಾವಾಗ ಸೇರುತ್ತಾರೆ?

ರೈಡ್ ಆಗುತ್ತದೆಂಬ ಸುದ್ದಿ ಬಂದಾಗ.

ರತ್ನಜ, ಮೈಸೂರು

ವೈದ್ಯರು, ವಕೀಲರು ಜೀವನವಿಡೀ ಪ್ರಾಕ್ಟೀಸ್ ಮಾಡುತ್ತಾರಲ್ಲ, ಪರ್ಫೆಕ್ಟ್ ಆಗುವುದು ಯಾವಾಗ?



ಇಂತಿಂಥದ್ದಕ್ಕೆ ಇಷ್ಟಿಷ್ಟೇ ಎಂದು ಪರ್ಫೆಕ್ಟಾಗಿ ಬಿಲ್ ಮಾಡುವಾಗ.

ಲಕ್ಷ್ಮೀನಾರಾಯಣ, ಹೊಸಕಣ

ಧಾರಾವಾಹಿಗಳಲ್ಲಿ ಇನ್ನೊಬ್ಬರ ಮಾತುಗಳನ್ನು ಕದ್ದು ಕೇಳುವಷ್ಟು ನಿಜಜೀವನದಲ್ಲಿ ಸಾಧ್ಯವಾದರೆ?

ಹೆಚ್ಚು ಹೆಚ್ಚು ಪೊಲೀಸ್ ಠಾಣೆಗಳು, ಕೋರ್ಟುಗಳು, ಮಸಣಗಳು ಬೇಕಾಗುತ್ತವೆ.

ಹೆಚ್.ವಿ. ಶ್ರೀಧರ್, ಬೆಂಗಳೂರು

ನಮ್ಮ ಬಡಾವಣೆಯಲ್ಲಿ ದಿನಕ್ಕೆ 30–40 ಬಾರಿ ಕರೆಂಟ್ ಹೋಗುತ್ತದೆ. ನಿಮ್ಮ ಏರಿಯಾದಲ್ಲಿ?

ಎರಡೇ ಬಾರಿ – ಒಂದು ಬಾರಿಗೆ ಆರು ಗಂಟೆಗಳಂತೆ!

■ ರಾಮ್